# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ:ಕಾ.ಅ/ಹೆಚ್.ಎ.ಎಲ್/ಪಿಆರ್/ 04/2022-23 ದಿನಾಂಕ: 17-10-2022

### 03 ನೇ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:04/04/2022, ಆದೇಶದಂತೆ ಜಂಟಿ ಆಯುಕ್ತರು ಮಹದೇವಪುರ ವಲಯ ರವರ ಕಛೇರಿ ಆದೇಶ ಸಂ:ಜಂಆ/ಮವ/ಪಿ.ಎಸ್/ 1651/2022-23 ದಿನಾಂಕ: 18-07-2022 ರಂತೆ ಶ್ರೀ.ಸೋಮಯ್ಯ.ಜಿ.ಡಿ , ಸಹಾಯಕ ಅಭಿಯಂತರು (ವಾರ್ಡ್ ನಂ-91 .ಎ.ನಾರಾಯಣಪುರ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರನ್ನು ವಾರ್ಡ್ ನಂ-91 .ಎ.ನಾರಾಯಣಪುರದ ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿಯನಾಗಿ ನೇಮಿಸಿರುತ್ತಾರೆ. ಅದರಂತೆ ದಿನಾಂಕ:23-09-2022ರಂದು ನೋಡಲ್ ಅಧಿಕಾರಿಯಾದ ಶ್ರೀ.ಸೋಮಯ್ಯ.ಜಿ.ಡಿ, ಸಹಾಯಕ ಅಭಿಯಂತರು (ವಾರ್ಡ್ ನಂ-91 ಎ.ನಾರಾಯಣಪುರ) ರವರ ಅದ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ |
|---|---|---|
| | ಅಧಿಕಾರಿಗಳು | |
| 1 | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 2 | ಶ್ರೀ.ಭಾಗ್ಯಮ್ಮ | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ |
| 3 | ಶ್ರೀ.ಸ್ವಪ್ನ.ಎನ್.ಕೆ | ಸಹಾಯಕ ಅಭಿಯಂತರರು, ಕೆರೆಗಳ ವಿಭಾಗ |
| 4 | ಶ್ರೀ. ಪ್ರಭಾಕರನ್ | ಕಂದಾಯ ಪರಿವೀಕ್ಷಕರು |
| 5 | ಶ್ರೀಮತಿ.ಸುವರ್ಣ ಹೆಚ್.ಸಿ | ಕಿರಿಯ ಆರೋಗ್ಯ ನಿರೀಕ್ಷಕರು |
| 6 | ಶ್ರೀ.ಗಂಗಾಧರಪ್ಪ | ಕೆಲಸದ ಪರಿವೀಕ್ಷಕರು( ಬಿ.ಡಬ್ಲೂ.ಎಸ್.ಎಸ್.ಬಿ) |
| 7 | ಶ್ರೀ.ರಾಜಪ್ಪ.ಕೆ | ಟ್ರಾಫಿಕ್ ಪೋಲೀಸ್, ಕೆ.ಆರ್.ಪುರ |
| 8 | ಶ್ರೀ.ಅಖಿಲ್ | ಡೇಟಾ ಎಂಟ್ರಿ ಆಪರೇಟರ್, ಕಂದಾಯ ಇಲಾಖೆ. |
| | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು | |
| 9 | ಶ್ರೀ.ಸುರೇಶ್.ವಿ | ಎ-ನಾರಾಯಣಪುರ |
| 10 | ಶ್ರೀ.ಜಿ.ಪ್ರದೀಪ್ ರೆಡ್ಡಿ | ಎ-ನಾರಾಯಣಪುರ |
| 11 | ಶ್ರೀ.ಸುನಿಲ್ | ಎ-ನಾರಾಯಣಪುರ |
| 12 | ಶ್ರೀ.ಎ.ಗಣೇಶ್ | ಎ-ನಾರಾಯಣಪುರ |
| 13 | ಶ್ರೀಮತಿ. ನಾಗಮಣಿ | ಎ-ನಾರಾಯಣಪುರ |
| 14 | ಶ್ರೀ. ಶ್ರೀನಿವಾಸ್.ಆರ್ | ಎ-ನಾರಾಯಣಪುರ |
| 15 | ಶ್ರೀ. ಶಂಕರ್ | ಎ-ನಾರಾಯಣಪುರ |
| 16 | ಶ್ರೀ.ಬಿ.ರಾಜಪ್ರಭು | ಎ-ನಾರಾಯಣಪುರ |
| 17 | ಶ್ರೀ.ಜಿ.ಕೃಷ್ಣಮೂರ್ತಿ | ಎ-ನಾರಾಯಣಪುರ |
| 18 | ಶ್ರೀ.ಸುಂದರಂ | ವ-ನಾರಾಯಣಪುರ |
| 19 | ಶ್ರೀ.ಜಿ,ರಾಮಪ್ಪ | ಎ-ನಾರಾಯಣಪುರ |
| 20 | ಶ್ರೀ.ವೀರಭದ್ರಾಚಾರ್ | ಎ-ನಾರಾಯಣಪುರ |

| | | |
|---|---|---|
| 21 | ಶ್ರೀ.[illegible] | ಎ–ನಾರಾಯಣಪುರ |
| 22 | ಶ್ರೀ.ಎಸ್.ನಾರಾಯಣ | ಎ–ನಾರಾಯಣಪುರ |
| 23 | ಶ್ರೀಮತಿ.ಸುಲೇಖ | ಎ–ನಾರಾಯಣಪುರ |
| 24 | ಶ್ರೀಮತಿ.ಯಶೋದ | ಎ–ನಾರಾಯಣಪುರ |
| 25 | ಶ್ರೀ.ರವಣಪ್ಪ | ಎ–ನಾರಾಯಣಪುರ |

**ನಡಾವಳಿ 1. ಕೋವಿಡ್–19ರ ಸಾಂಕ್ರಮಿಕ ರೋಗಕ್ಕೆ ಸಂಬಂಧಿಸಿದಂತೆ, ಸಾಂಬಾವ್ಯ ನಾಲ್ಕನೇ ಅಲೆಯನ್ನು ನಿಯಂತ್ರಿಸುವ ಬಗ್ಗೆ ಮತ್ತು ಸೊಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ.**

ಆರೋಗ್ಯಾಧಿಕಾರಿಗಳು ಮಾತನಾಡಿ ನಾಯಿ ಕಚ್ಚಿ ಅನಾರೋಗ್ಯ ಪಿಡಿತರಾಗಿರುವ ರೋಗಿಗಳ ಸಂಖ್ಯೆ ಹೆಚ್ಚಾಗಿರುತ್ತದೆ ಅದಕ್ಕೆ ಸರಿಯಾದ ಪ್ರಮಾಣದ ಔಷರಿಯು ಲಭ್ಯವಿಲ್ಲವೆಂದು ತಿಳಿಸಿರುತ್ತಾರೆ.

**ನಡಾವಳಿ 2. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳ ಸಂಬಂಧಿಸ್ಪಿದ ವಿಷಯಗಳ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಒತ್ತಡದ ಸಮಸ್ಯೆ ಇರುವುದರಿಂದ ಎತ್ತರ ಪ್ರದೇಶಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರು ಪೂರೈಕೆಯಾಗುತ್ತಿಲ್ಲವೆಂದು ಮತ್ತು ಉದಯನಗರ, ಪೈ ಬಡಾವಣೆ, ನೇತ್ರಾವತಿ ರಸ್ತೆ, ಗಂಗಪ್ಪ ಬಡಾವಣೆ ಹಾಗೂ ವಿವೇಕಾನಂದ ರಸ್ತೆಯಲ್ಲಿ ನೀರಿನ ವಾಲ್ವ್‌ಗಳಲ್ಲಿ ನೀರು ಸೋರಿಕೆಯಾಗುತ್ತಿರುತ್ತದೆ ಎಂದು ಸಾರ್ವಜನಿಕರು ಮನವಿ ಮಾಡಿಕೊಂಡರು ಅದರಂತೆ ಸಭೆಯಲ್ಲಿ ಗೈರಾಜರಿದ್ದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರಿಗೆ ತಿಳಿಸಲು ಸೂಚಿಸಲಾಗಿದೆ.

ಕ್ರಮ: ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಅಭಿಯಂತರರು.

**ನಡಾವಳಿ 3.ಬೀದಿ ದೀಪಗಳ ನಿರ್ವಹಣೆ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಆಂದ್ರ ಕಾಲೋನಿ, ವಿ.ಎಸ್.ಆರ್ ಬಡಾವಣೆ , ಇಂದಿರಾ ಗಾಂಧಿ ಬೀದಿ 4ನೇ ಮುಖ್ಯರಸ್ತೆ, ಹಾಗೂ ಕುವೆಂಪು ಬೀದಿಗಳಲ್ಲಿ ಬೀದಿ ದೀಪಗಳು ಸರ್ಮಪಕವಾಗಿ ಉರಿಯುತ್ತಿಲ್ಲವೆಂದು ಸಾರ್ವಜನಿಕರು ತಿಳಿಸಿರುತ್ತಾರೆ, ಅದರಂತೆ ಕೊಡಲೇ ಕ್ರಮ ವಹಿಸಬೇಕೆಂದು ಸಂಬಂಧಿಸಿದ ಅಭಿಯಂತರರಿಗೆ ತಿಳಿಸಲು ತೀರ್ಮಾನಿಸಲಾಯಿತು.

**ನಡಾವಳಿ 4.ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ .**

ವಾರ್ಡ್‌ನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು.ವಾರ್ಡ್ ವ್ಯಾಪ್ತಿಯ ನೇತ್ರಾವತಿ, ಮೈತ್ರಿ ಸ್ಕೂಲ್, ಸಾಕಮ್ಮ ಬಡಾವಣೆ ಮತ್ತು ವಿ.ಎಸ್.ಆರ್. ಬಡಾವಣೆಯಲ್ಲಿ ರಸ್ತೆಗಳ ಕಾಮಗಾರಿ ಮತ್ತು ಚರಂಡಿಯ ಕಾಮಗಾರಿಯನ್ನು ಅರ್ಧಕ್ಕೆ ಸ್ಥಗಿತಗೊಳಿಸಿದು ಪ್ರಾರಂಭಿಸುವಂತೆ ಸಾರ್ವಜನಿಕರು ಒತ್ತಾಯಿಸಿದರು, ಅದರಂತೆ ಸಾರ್ವಜನಿಕರ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ 91

**ನಡಾವಳಿ 5. ಇನ್ನಿತರೆ ವಿಷಯಗಳ ಬಗ್ಗೆ.**

5(ಎ).
ವಾರ್ಡ್ ವ್ಯಾಪ್ತಿಯಲ್ಲಿ ವಿವಿಧ ಕಡೆ ಸಿ.ಸಿ.ಕ್ಯಾಮರಗಳ ಅವಶ್ಯಕತೆ ಇರುವುದೆಂದು ಸಾರ್ವಜನಿಕರು ತಿಳಿಸಿರುತ್ತಾರೆ, ಅದರಂತೆ ಸಮಸ್ಯೆಯನ್ನು ಬಗೆಹರಿಸುವಂತೆ ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಸಹಾಯಕ ಅಭಿಯಂತರರು ವಾರ್ಡ್ 91

5(ಬಿ)
ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದಯನಗರ ಮುಖ್ಯರಸ್ತೆಗಳಲ್ಲಿ ನಿರಂತರವಾಗಿ ರಸ್ತೆ ಸ್ವಚ್ಚತಾ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಸಾರ್ವಜನಿಕರು ಕೋರಿರುತ್ತಾರೆ. ಅದರಂತೆ ಸಮಸ್ಯೆಗಳನ್ನು ಬಗೆಹರಿಸುವಂತೆ ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಸಹಾಯಕ ಅಭಿಯಂತರರಿಗೆ ಸೂಚಿಸಲಾಯಿತು.

ಕ್ರಮ: ಕಿರಿಯ ಆರೋಗ್ಯ ಪರಿವೀಕ್ಷಕರು,ವಾರ್ಡ್ 91

5(ಸಿ)

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬಿ.ನಾರಾಯಣಪುರ ಕೆರೆ ಅಭಿವೃದಿ ವಿಷಯವಾಗಿ ಸಾರ್ವಜನಿಕರು ಕೋರಿರುತ್ತಾರೆ, ಸಭೆಯಲ್ಲಿ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರು, ಕೆರೆಗಳ ವಿಭಾಗದವರು ಮಾತಾನಾಡಿ, ಈಗಾಗಲೇ ಬಿ.ನಾರಾಯಣಪುರ ಅಭಿವೃದಿಗಾಗಿ ಅಂದಾಜು ಪಟ್ಟಿಯನ್ನು ತಯಾರಿಸಿ ಅನುಮೋದನೆಗಾಗಿ ಕಳುಹಿಸಲಾಗಿದೆ ಎಂದು ತಿಳಿಸಿರುತ್ತಾರೆ.

17/10/22

ನೋಡಲ್ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ
ಸಹಾಯಕ ಅಭಿಯಂತರರು ವಾರ್ಡ್ ನಂ.91
ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.